




ಮೊಬೈಲ್‌ನಲ್ಲಿ ಯಾರದೋ ಜೊತೆ ಆನಂದವಾಗಿ ಮಾತನಾಡುತ್ತಿದ್ದಳು. ಅದೇನು ಗ್ರಹಚಾರ ಕಾದಿತ್ತೋ ಅದೇ ಟೈಮಿಗೆ ಪಕ್ಕದ ಮನೆ ವಿಮಲಮ್ಮ ಯಾವುದೋ ಮದುವೆಗೋ ಗೃಹಪ್ರವೇಶಕ್ಕೋ ಹೋಗಲು ರೇಷ್ಮೆ ಸೀರೆ ಉಟ್ಟು, ಮೈ ತುಂಬಾ ಒಡವೆ ತೊಟ್ಟು ಅಂದವಾಗಿ ಅಲಂಕಾರ ಮಾಡಿಕೊಂಡು ಹೊರಬಂದಳು. ಅವಳನ್ನು ನೋಡಿದ ಕೂಡಲೇ ಕಮಲಮ್ಮನಿಗೆ ಸಿಟ್ಟು, ಸಂಕಟ ಉಕ್ಕಿ ಬಂತು. ತಡೆದುಕೊಳ್ಳಲಾಗದೆ ಕೈಯಲ್ಲಿದ್ದ ಮೊಬೈಲ್ ಎಸೆದುಬಿಟ್ಟಳು. ಮೊಬೈಲ್ ಒಡೆದು ಹೋಗಿದ್ದಕ್ಕೆ ವಿಮಲಮ್ಮನಿಗೆ ಶಾಪ ಹಾಕಿದಳು. ಕಳೆದ ತಿಂಗಳು ಇದೇ ಕಮಲಮ್ಮ ಮನೆಯಲ್ಲಿ ಕೇಕೆ ಹಾಕಿಕೊಂಡು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದುದನ್ನು ಕೇಳಲಾಗದೆ ಟೀವಿ ನೋಡುತ್ತಿದ್ದ ವಿಮಲಮ್ಮ ರಿಮೋಟ್ ಎಸೆದು ಹಾಳು ಮಾಡಿಕೊಂಡಿದ್ದಳು.

ಪಾರ್ವತಿ ಗಂಡ ದಿನಾ ರಾತ್ರಿ ಕುಡಿದು ಬರೋದು ಆ ಬೀದಿಯವರಿಗೆಲ್ಲಾ ಗೊತ್ತು. ದಿನಾ ಸಾಯುವವರಿಗೆ ಅಳೋರು ಯಾರು ಎಂದು ಪಾರ್ವತಿ ಗಂಡನಿಗೆ ಕಾಯದೆ ಉಂಡು, ಹೊದ್ದುಕೊಂಡು ಮಲಗುತ್ತಾಳೆ. ಆದರೆ ಪಾರ್ವತಿ ಗಂಡ ಬರೋವರೆಗೂ ನೆರೆಮನೆ ಗೌರಿ ಮಾತ್ರ ನಿದ್ರೆಗೆಟ್ಟು ಕಾಯುತ್ತಾಳೆ. ಗಂಡನ ಬಗ್ಗೆ ಪಾರ್ವತಿಗೇ ಇಲ್ಲದಿರುವ ಕಾಳಜಿ ಗೌರಿಗೆ ಏಕೆ? ಏಕೆಂದರೆ, ಅವಳ ಗಂಡ ತಟ್ಟಾಡಿಕೊಂಡು ತಡರಾತ್ರಿ ಬಂದಾಗ, ಪಾರ್ವತಿ ಬಾಗಿಲು ತೆರೆದು ಅವನಿಗೆ ಬಾಗಿಲಲ್ಲೇ ಬಾರಿಸುತ್ತಾಳಾ? ಒಳಗೆ ಬಂದ ಮೇಲೆ ಬಡಿಯುತ್ತಾಳಾ ಎಂದು ತಿಳಿಯುವ ಕುತೂಹಲ ಗೌರಿಗೆ. ಗಂಡ–ಹೆಂಡತಿ ಜಗಳ ಪೂರಾ ಮುಗಿದು, ಅವರು ಮಲಗುವವರೆಗೂ ಗೌರಿಯ ಕಣ್ಣಿಗೆ ನಿದ್ರೆ ಹತ್ತುವುದಿಲ್ಲ.

ನೆರೆಯವರೊಂದಿಗೆ ಹೊರೆಯಾಗದೆ ಬದುಕು ಸಾಗಿಸಲು ಪಂಚಸೂತ್ರಗಳನ್ನು ಅನುಭವದಿಂದ ಕಂಡುಕೊಂಡಿರುವೆ. ಅವುಗಳೆಂದರೆ:

ಸೂತ್ರ 1: ನೆರೆಮನೆಯವರು ಸಹಾಯ ಕೇಳಿಕೊಂಡು ಬಂದಾಗ ದುಡ್ಡು ಕಾಸು ಕೊಡಿ, ವಾಪಸ್ ಕೊಡಲಿಲ್ಲ ಅಂತ ಜಗಳ ತೆಗೆಯಬೇಡಿ, ನಿಮಗೂ ಕಷ್ಟ ಬಂದಾಗ ಅವರೆದುರು ಕೈ ಚಾಚುವ ಪರಿಸ್ಥಿತಿ ಬರಬಹುದು.

ಸೂತ್ರ 2: ನೆರೆಹೊರೆಯನ್ನು ನಿಮ್ಮಂತೆ ಪ್ರೀತಿಸಬೇಕು. ನಮ್ಮ ಸಂಸಾರವನ್ನು ಹೇಗೆ ನಿಭಾಯಿಸ್ತೀವಿ ಅನ್ನೋದಕ್ಕಿಂತ ನೆರೆಹೊರೆಯನ್ನು ಹೇಗೆ ಸಂಭಾಳಿಸಿಕೊಳ್ತೀವಿ ಎನ್ನುವುದರ ಮೇಲೆ ನಮ್ಮ ಸುಖ–ಶಾಂತಿ ನಿಂತಿರುತ್ತದೆ.

ಸೂತ್ರ 3: ಒಡಹುಟ್ಟಿದವರು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ನಮ್ಮಿಂದ ದೂರ ಆಗಬಹುದು. ಆದರೆ ಸಾಯೋವರೆಗೂ ಸಹವಾಸದಲ್ಲಿ ಇರುವವರು ನೆರೆಮನೆಯವರೇ ಎಂಬ ಸತ್ಯ ತಿಳಿಯಬೇಕು. ಅವರೊಂದಿಗೆ ಶಾಂತಿ, ಸೌಹಾರ್ದತೆ ಕೆಡದಂತೆ ಸಂಬಂಧ ಕಾಪಾಡಿಕೊಳ್ಳಬೇಕು.

ಸೂತ್ರ 4: ಕಷ್ಟಸುಖಕ್ಕೆ ಅಲ್ಲದಿದ್ದರೂ ಸಂಕ್ರಾಂತಿಗೆ ಎಳ್ಳು ಬೆಲ್ಲ ಹಂಚಲು, ವರಮಹಾಲಕ್ಷ್ಮಿ ಹಬ್ಬಕ್ಕೆ ಕುಂಕುಮಕ್ಕೆ ಕರೆಯಲಾದರೂ ಅಕ್ಕಪಕ್ಕದ ಮನೆಯವರೊಂದಿಗೆ ಸ್ನೇಹ, ಸಂಬಂಧ ಸಲೀಸಾಗಿರಬೇಕು.

ಸೂತ್ರ 5: ಸಂಸಾರವೆಂದ ಮೇಲೆ ಸಾವಿರ ಫಜೀತಿಗಳಿರುತ್ತವೆ. ಎಲ್ಲರ ಮನೆಯ ದೋಸೆ ತೂತು. ಅವರ ತೂತು ಇಣುಕಿ ನೋಡಲು ಹೋಗದೆ ನಿಮ್ಮ ಮನೆಯ ಕಿಟಕಿ ತೂತು ಮುಚ್ಚಿಕೊಂಡು ಬಾಳಬೇಕು. ನೆರೆಮನೆಯ ಕಾಂಪೌಂಡ್ ನಾಯಿ ರಾತ್ರಿಯೆಲ್ಲಾ ಬೊಗಳಿ ನಿದ್ರೆಗೆಡಿಸುತ್ತದೆ ಎಂದು ಆ ಮನೆಯವರ ಮೇಲೆ ಬೊಗಳುವುದು ಸರಿಯಲ್ಲ, ನಾಯಿ ಬೊಗಳುವುದು ಪ್ರಕೃತಿ ಧರ್ಮ ಎಂದುಕೊಂಡು ಸುಮ್ಮನಿರಬೇಕಷ್ಟೇ.

ಅರಮನೆಯಂಥಾ ಮನೆ ಇದ್ದರೂ ನೆರೆಮನೆ ಇರಬೇಕು. ನೆರೆ ಹಾವಳಿ ಸಹಿಸಿಕೊಂಡೇ ಬಾಳುವ ಮನಸ್ಥಿತಿ ಎಲ್ಲರಲ್ಲೂ ಇರಬೇಕು.

ಪ್ರತಿಕ್ರಿಯಿಸಿ: feedback@sudha.co.in